

# ಶ್ರೀರಾಮಕೃಷ್ಣ ತೀರ್ಥಸ್ಥಾನಗಳು

ಸರೋಜ ಚಾಮಯ್ಯ

ಕೊಲ್ಕಾತದ ಹತ್ತಿರದಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕೇಂದ್ರವಾದ ಬೇಲೂರು ಮಠ ಹಾಗೂ ಅದರ ಆಸುಪಾಸಿನಲ್ಲಿರುವ ಕಾಶಿಪುರ್, ಉದ್ಬೋಧನ, ಕಾಂಕುರ್‌ಗಾಚಿಯಷ್ಟೇ ಅಲ್ಲದೆ ಜಯರಾಮವಟಿ, ಕಾಮಾರ ಪುಕುರ ಇವೆಲ್ಲವೂ ಶ್ರೀರಾಮಕೃಷ್ಣ ಭಕ್ತರ ಭಾವ ಪ್ರಪಂಚ ವನ್ನು ಉದ್ದೀಪನಗೊಳಿಸುವ ಪವಿತ್ರ ತೀರ್ಥಸ್ಥಾನಗಳು. ಈ ತೀರ್ಥಸ್ಥಾನಗಳಿಗೆ ಇತ್ತೀಚೆಗೆ ಯಾತ್ರೆ ಹೋಗಿದ್ದ ಆಶ್ರಮದ ನಿಕಟ ಭಕ್ತರಾದ ಶ್ರೀಮತಿ ಸರೋಜ ಚಾಮಯ್ಯ ನವರು ತಮ್ಮ ವಿಶೇಷ ಅನುಭವವನ್ನು ಈ ಪ್ರವಾಸ ಕಥನದಲ್ಲಿ ಹಂಚಿಕೊಂಡಿದ್ದಾರೆ.

**ಶ್ರೀರಾಮಕೃಷ್ಣರಿಗೆ** ಸಂಬಂಧಿಸಿದ ತೀರ್ಥಸ್ಥಳಗಳನ್ನು ಹಿಂದೆ ಕೆಲವು ಬಾರಿ ಸಂದರ್ಶಿಸಿದ್ದರೂ ಇನ್ನೊಮ್ಮೆ ನೋಡಬೇಕೆಂಬ ಆಸೆ ಚಿಗುರೊಡೆಯಿತು. ಇದು ಅವರ ಕರೆಯೆಂದೇ ನಾನು ಭಾವಿಸುತ್ತೇನೆ. ಮೈಸೂರು ಆಶ್ರಮದ ಇನ್ನೊಬ್ಬರು ಭಕ್ತರಾದ ರಂಗಮ್ಮನವರು "ನನ್ನನ್ನೂ ಕರೆದುಕೊಂಡು ಹೋಗಿ" ಎಂದು ಕೇಳಿಕೊಂಡರು. "ಆಯಿತು"ಎಂದೆ. ಸಾವಿತ್ರಿ ಎಂಬ ಇನ್ನೊಬ್ಬರು ಭಕ್ತರೂ ನಮ್ಮೊಂದಿಗೆ ಸೇರಿದರು. ಹೀಗೆ ನಾವು ಮೂವರು ಈ ಪವಿತ್ರ ಯಾತ್ರೆಗೆ ಸಜ್ಜಾದೆವು.

೬.೪.೨೦೦೧ರಂದು ರಾತ್ರಿ ೧೧.೩೦ ಕ್ಕೆ ಗೌಹಾತಿ ಎಕ್ಸ್‌ಪ್ರೆಸ್‌ನಲ್ಲಿ ಹೊರಟ ನಾವು ಮೂವರು ಮಂದಿ ಸೋದರಿಯರು ೮.೪.೨೦೦೧ರಂದು ಮಧ್ಯಾಹ್ನ ೧.೩೦ಗಂಟೆಗೆ ಕೊಲ್ಕಾತದ ಹೌರಾ ನಿಲ್ದಾಣವನ್ನು ತಲುಪಿದೆವು. ಟ್ಯಾಕ್ಸಿಯೊಂದರಲ್ಲಿ ಶ್ರೀರಾಮಕೃಷ್ಣರಿಗೆ ಸಂಬಂಧಿಸಿದ ಅತ್ಯಂತ ಪವಿತ್ರ ಸ್ಥಳವಾದ ಮತ್ತು ರಾಮಕೃಷ್ಣ ಮಹಾ ಸಂಘದ ಪ್ರಧಾನ ಕೇಂದ್ರವಾದ ಬೇಲೂರು ಮಠದ ಅತಿಥಿಗೃಹಕ್ಕೆ ಹೋದೆವು. ಮೊದಲೇ ತಿಳಿಸಿದ್ದುದರಿಂದ ಕೊಠಡಿ ಸಿದ್ಧವಾಗಿತ್ತು.

ಸ್ವಲ್ಪ ವಿಶ್ರಾಂತಿಯ ನಂತರ ಸಂಜೆಯ ಹೊತ್ತಿಗೆ ಮಠದ ಕಡೆ ಹೊರಟೆವು. ಅತಿಥಿಗೃಹದಿಂದ ಬರುವಾಗ ಮೊದಲು ಸಿಕ್ಕುವುದು ಸ್ವಾಮಿ ವಿವೇಕಾನಂದರ ದೇವಾಲಯ. ಅಲ್ಲಿ ನಮಿಸಿ ಪಕ್ಕದಲ್ಲಿರುವ ಶ್ರೀಮಾತೆ ಶಾರದಾದೇವಿಯವರ ಮಂದಿರಕ್ಕೆ ಬಂದೆವು. ತಾಯಿಯವ ರಿಗೆ ರೇಶಿಮೆಯ ಸೀರೆಯೊಂದನ್ನು ಉಡಿಸಿದ್ದರು. ಸಣ್ಣ ಸಣ್ಣ ನೆರಿಗೆ ಗಳನ್ನು ಮಾಡಿ ಉಡಿಸಿದ್ದ ರೀತಿಯಲ್ಲಿ ಆ ತಾಯಿ ಬಹು ಸುಂದರ ವಾಗಿ ಕಂಗೊಳಿಸುತ್ತಿದ್ದರು. ಅವರು ಗಂಗೆಗೆ ಎದುರಾಗಿ ಕುಳಿತಿದ್ದರು.



ಬೇಲೂರು ಮಠದಲ್ಲಿನ ಶ್ರೀಮಾತೆಯವರ ಸನ್ನಿಧಿ

ತಾಯಿಯ ಬಲಗಡೆ ಅಲ್ಲಿಯ ಅರ್ಚಕರು ದೈನ್ಯತೆಯೇ ಮೂರ್ತಿ ವೆತ್ತಂತೆ ಧ್ಯಾನಾಸಕ್ತರಾಗಿ ಕುಳಿತಿದ್ದರು. ಅವರ ಪಕ್ಕದ ದೇವಾ ಲಯದಲ್ಲಿ ಸ್ವಾಮಿ ಬ್ರಹ್ಮಾನಂದರು ಕಾಪಿಯನ್ನುಟ್ಟು ಕುಳಿತಿದ್ದರೆ

| ಶೀರ್ಷಿಕೆಯ ಚಿತ್ರ | ಶ್ರೀರಾಮಕೃಷ್ಣರ ಜನ್ಮಸ್ಥಳವಾದ ಕಾಮಾರಪುಕುರದಲ್ಲಿ ಅವರ ಮನೆತನದ ಮನೆಯ ಮುಂದೆಯೇ ಇರುವ ಹಲದಾರಪುಕುರವೆಂಬ ಕೊಳ |
|---|---|

ಕೆಳಗಡೆಯ ಪೀಠದಲ್ಲಿ ಬಾಲಕೃಷ್ಣನೊಬ್ಬ ಅಲಂಕೃತನಾಗಿ ನಸುನಗುತ್ತಾ ಕುಳಿತಿದ್ದ. ಈ ಎಲ್ಲಾ ದೇವಾಲಯಗಳಲ್ಲೂ ಹೂಗಳ ಮತ್ತು ಊದುಗಡ್ಡಿಯ ಪರಿಮಳ ನವಿರಾಗಿ ತೇಲಿ ಬಂದು ಮೈಮನವನ್ನು ಎಲ್ಲೆಲ್ಲಿಗೋ ಕೊಂಡೊಯ್ಯುತ್ತಿತ್ತು. ಈ ಎಲ್ಲದರ ಮುಂದೆ ಗಂಗೆ ಸೌಮ್ಯವಾಗಿ ಹರಿಯುತ್ತಿದ್ದಳು. ಅವಳ ಬಳಿ ಬಂದು ನಿಂತೆವು. ಅಲೆಗಳು ಮೃದುಮೃದುವಾಗಿ ತೇಲಿ ಬಂದು ಈ ಮೂವರಿಗೂ, ಗುರುದೇವರಿಗೂ ತಮ್ಮ ಪ್ರಣಾಮಗಳನ್ನು ಸಲ್ಲಿಸಿ ಹಿಂತಿರುಗುತ್ತಿದ್ದುದು ಬಹು ಆಪ್ಯಾಯಮಾನವಾಗಿತ್ತು. ಸ್ವಲ್ಪ ಹೊತ್ತು ಅಲ್ಲಿ ಕುಳಿತಿದ್ದು ಆಫೀಸಿನೆಡೆಗೆ ಬಂದೆವು, ನಾವು ಇಲ್ಲಿಗೆ ಬಂದಿರುವುದನ್ನು ಸ್ವಾಮೀಜಿಯವರಿಗೆ ತಿಳಿಸಲು. ಬಾಗಿಲಿಗೆದುರಾಗಿ ಸ್ವಾಮೀಜಿಯವರೊಬ್ಬರು ನಮ್ಮನ್ನು ಕಂಡೊಡನೆ ಮೈಸೂರಿನಿಂದ ಬಂದವರೇ ಎಂದರು. ಹೌದು ಎಂದೆವು. ಕುಳಿತುಕೊಳ್ಳಲು ಹೇಳಿದರು. ಮೈಸೂರಿನ ರಾಮಕೃಷ್ಣಾಶ್ರಮದ ಅಧ್ಯಕ್ಷರು ಕೊಟ್ಟ ಕಾಗದವನ್ನು ಕೊಟ್ಟೆವು. ಅತಿಥಿಗೃಹದಲ್ಲಿ ಎಲ್ಲ ವ್ಯವಸ್ಥೆಯ ಬಗ್ಗೆಯೂ ನಮ್ಮ ಯೋಗಕ್ಷೇಮದ ಬಗ್ಗೆಯೂ ವಿಚಾರಿಸುತ್ತ ತುಂಬ ಆತ್ಮೀಯವಾಗಿ ಮಾತನಾಡಿಸಿದರು.

ಅಲ್ಲಿದ್ದ ಇತರ ಸ್ವಾಮೀಜಿಯವರಿಗೆ ನಮಿಸಿ ಹೊರಬಂದೆವು. ಶ್ರೀರಾಮಕೃಷ್ಣರ ಹಳೆಯ ದೇವಾಲಯಕ್ಕೆ ಹೋದೆವು. ಶ್ರೀರಾಮಕೃಷ್ಣರ ಅನೇಕ ಪ್ರತ್ಯಕ್ಷ ಶಿಷ್ಯರು ಧ್ಯಾನ ಮಾಡಿದ, ತಮ್ಮ ಗುರುವನ್ನು ಭಾವಾವೇಶದಿಂದ ಪೂಜಿಸಿದ ಸ್ಥಳವಿದು. ಹಳೆಯ ಘಟನೆಗಳನ್ನೆಲ್ಲ ನೆನೆಸಿಕೊಂಡು ಭಕ್ತಿಯಿಂದ ಕಣ್ಣು ಹನಿಗೂಡಿತು. ಸ್ವಲ್ಪ ಹೊತ್ತು ಅಲ್ಲಿಯ ಪವಿತ್ರ ವಾತಾವರಣವನ್ನು ಸವಿದು ಸ್ವಾಮಿ ವಿವೇಕಾನಂದರು ವಾಸಿಸುತ್ತಿದ್ದ ಕೊಠಡಿಗೆ ಹೋದೆವು. ಅಲ್ಲಿ ಅವರು ಉಪಯೋಗಿಸುತ್ತಿದ್ದ ವಸ್ತುಗಳೆಲ್ಲವನ್ನೂ ಇಟ್ಟಿದ್ದರು. ಅವನ್ನೆಲ್ಲ ನೋಡಿ ಅವರ ದಿವ್ಯಸಾನ್ನಿಧ್ಯವನ್ನು ಭಾವಿಸುತ್ತ ಮೈಪುಳಕಿತಗೊಂಡಿತು. ಅನಂತರ ಶ್ರೀರಾಮಕೃಷ್ಣರ ಭವ್ಯದೇವಾಲಯಕ್ಕೆ ಹೋದೆವು.



ಬೇಲೂರು ಮಠದಲ್ಲಿನ
ಶ್ರೀರಾಮಕೃಷ್ಣರ ದಿವ್ಯಮೂರ್ತಿ

ಗುರುದೇವ ಶ್ರೀರಾಮಕೃಷ್ಣರ ಬಳಿಸಾರಬೇಕಾದರೆ ಹಲವಾರು ಮೆಟ್ಟಲುಗಳನ್ನು ಹತ್ತಬೇಕು. ಒಂದೊಂದು ಮೆಟ್ಟಲನ್ನು ಏರುವಾಗಲೂ ನರನಾಡಿಗಳೆಲ್ಲಾ ಗುರುದೇವಾ, ಗುರುದೇವಾ ಎಂದು ಜಪಿಸುತ್ತಿತ್ತು. ಒಳಹೋದೆವು. ಗುರುದೇವರ ಬಳಿಸಾರಿದೆವು. ನಮ್ಮನ್ನು ತಮ್ಮ ಬಳಿ ಕರೆಯಿಸಿಕೊಂಡು ಕೃಪೆಯಿಂದ ನಮ್ಮನ್ನು ನೋಡುತ್ತಿರುವಂತೆ ಅನಿಸಿತು. ರೋಮಾಂಚನವಾಯಿತು. ಆನಂದ ಬಾಷ್ಪಗಳು ಉದುರಿದುವು. ಭಕ್ತಿಯಿಂದ ಮಣಿದೆವು. ಪ್ರಾರ್ಥನೆಯ ವೇಳೆಯಾದುದರಿಂದ ಪ್ರಾರ್ಥನಾಲಯ ಭಕ್ತರಿಂದ ತುಂಬುತ್ತಿತ್ತು. ನಾವೂ ಒಂದು ಪ್ರಶಸ್ತ ಸ್ಥಳದಲ್ಲಿ ಕುಳಿತೆವು. ಆರತಿಯನ್ನು ನೋಡಿದೆವು, ಮೈಮರೆತು. ಆರತಿಯ ನಂತರ ಅತಿಥಿಗೃಹಕ್ಕೆ ಬಂದೆವು. ಸ್ವಲ್ಪ ಹೊತ್ತು ಸ್ತೋತ್ರಪಾಠ, ಸ್ವಲ್ಪ ಹೊತ್ತು ಜಪ ಮತ್ತೆ ಅದೂ ಇದೂ ಮಾತನಾಡುವ ವೇಳೆಗೆ ಊಟದ ಘಂಟೆ ಬಾರಿಸಿತು. ಗುರುದೇವರ ನೈವೇದ್ಯದ ಅನ್ನ ಮತ್ತು ಪಾಯಸ, ಚಪಾತಿ, ಪಲ್ಯ, ಅನ್ನ, ಡಾಲ್, ಊಟಕ್ಕೆ. ನಾವು ಮೂರು ಮಂದಿಗೆ ಮಾತ್ರ ರಾತ್ರಿ ಮೊಸರು. ಎಲ್ಲರಿಗೂ ಒಂದೊಂದು ದೊಡ್ಡ ಲೋಟದಲ್ಲಿ ಬಿಸಿ ಬಿಸಿ ಹಾಲು ಊಟದ ನಂತರ. ಗುರುದೇವರ ನೈವೇದ್ಯದ ಪ್ರಸಾದ ಸಿಕ್ಕಬೇಕಾದರೆ ನಾವೆಷ್ಟು ಪುಣ್ಯ ಮಾಡಿರಬೇಕು! ಕೊಠಡಿಗೆ ಹಿಂದಿರುಗಿ ಬೆಳಗಿನಿಂದ ನಡೆದುದೆಲ್ಲವನ್ನೂ ಮೆಲುಕು ಹಾಕುತ್ತಾ ಮಲಗಿದೆವು.

ಮುಂಜಾನೆಯೇ ಎದ್ದು ಸ್ನಾನಾದಿಗಳನ್ನು ಮುಗಿಸಿ ದೇವಾಲಯಗಳೆಡೆಗೆ ಬಂದೆವು. ಸ್ವಾಮಿ ವಿವೇಕಾನಂದರ, ಶಾರದಾದೇವಿಯವರ ಮತ್ತು ಸ್ವಾಮಿ ಬ್ರಹ್ಮಾನಂದರ ದೇವಾಲಯಗಳನ್ನು ಸಂದರ್ಶಿಸಿ ಗಂಗೆಯ ಬಳಿ ಸ್ವಲ್ಪ ಹೊತ್ತು ನಿಂತು ಗುರುದೇವನ ಬಳಿ ಹೋಗಿ ಅಲ್ಲಿಯೂ ಸ್ವಲ್ಪ ಹೊತ್ತು ಕುಳಿತು ಆಫೀಸಿಗೆ ಹೋದೆವು, ಮುಂದಿನ ನಮ್ಮ ಪಯಣದ ಬಗ್ಗೆ ತಿಳಿಯಲು. ನಾವು ಮಾರನೆಯ ದಿನ ಬೆಳಿಗ್ಗೆ ಏಳು ಗಂಟೆಗೆ ಸಿದ್ಧವಾಗಿರಬೇಕೆಂದೂ ಟ್ಯಾಕ್ಸಿಯೊಂದು ಬಂದು ನಮ್ಮನ್ನು ಕರೆದೊಯ್ಯುವುದೆಂದೂ ತಿಳಿಸಿದರು. ಸ್ವಾಮೀಜಿಯವರಿಗೆ ನಮಿಸಿ ಅತಿಥಿಗೃಹಕ್ಕೆ ಬಂದೆವು.

ನಾವು ಅಲ್ಲಿ ತಲುಪಿದ ಕೆಲವೇ ನಿಮಿಷಗಳಲ್ಲಿ ಊಟದ ಘಂಟೆ ಬಾರಿಸಿತು. ಊಟ ಮುಗಿಸಿ ವಿಶ್ರಾಂತಿಗೆಂದು ಮಲಗಿದೆವು. ಸ್ವಲ್ಪ ಹೊತ್ತು ಮಲಗಿದ್ದು ಮುಖಮಾರ್ಜನ ಮುಗಿಸಿ ಟೀ ಕುಡಿದು ದೇವಾಲಯದೆಡೆಗೆ ಬಂದೆವು. ಭಾನುವಾರವಾದುದರಿಂದ ಭಕ್ತರು ಗಂಗೆಯ ತಟದಲ್ಲಿ ನೆರೆದಿದ್ದರು. ಅಲ್ಲಿ ಒಂದು ಕಡೆ ಒಬ್ಬರು ಪಂಡಿತರಿಂದ ತುಲಸೀದಾಸ ರಾಮಾಯಣದ ಪಠಣ ನಡೆಯುತ್ತಿತ್ತು. ಗಂಗೆಯ ಝುಳ ಝುಳ ನಿನಾದ. ದೇವಾಲಯಗಳಿಂದ ನವಿರಾಗಿ ಗಾಳಿಯೊಂದಿಗೆ ಬರುತ್ತಿದ್ದ ಹೂವಿನ, ಗಂಧದ ಪರಿಮಳದಲ್ಲಿ ನಾವು ತೇಲಿಹೋಗುತ್ತಿದ್ದೆವು. ಯಾವುದೋ ಬೇರೊಂದು ಪ್ರಪಂಚದಲ್ಲಿ ಇರುವಂತೆ ಅರಿವಾಯಿತು. ಕತ್ತಲಾಗುವ ವೇಳೆಗೆ ಪ್ರಾರ್ಥನಾಲಯಕ್ಕೆ ಬಂದು ಗುರುದೇವನಿಗೆ ನಮಿಸಿ ಜಪಿಸುತ್ತಾ ಕುಳಿತೆವು. ಆರತಿ ಪ್ರಾರಂಭವಾಯಿತು. ಅದರಲ್ಲೇ ಮಗ್ನರಾದೆವು. ಮುಗಿದಮೇಲೂ ಸ್ವಲ್ಪ ಹೊತ್ತು ಕುಳಿತಿದ್ದು ಅತಿಥಿಗೃಹಕ್ಕೆ ಬಂದು ಸ್ವಲ್ಪ ಸ್ತೋತ್ರ ಮಾಡಿ ಊಟದ ವೇಳೆಗೆ ಊಟ ಮುಗಿಸಿ ಮಲಗಿದೆವು.

ಮುಂಜಾನೆಯೇ ಸ್ನಾನ ಮುಗಿಸಿ ಟೀ ಕುಡಿದು ಸಿದ್ಧರಾದೆವು. ಟ್ಯಾಕ್ಸಿ ಬಂದಿತು. ಅದರಲ್ಲಿ ಹೊರಟು ದಕ್ಷಿಣೇಶ್ವರಕ್ಕೆ ಬಂದೆವು. ಮಂಗಳವಾರವಾದುದರಿಂದ ತಾಯಿ ಕಾಳಿಯ ದರ್ಶನಕ್ಕೆ ಉದ್ದನೆಯ ಕ್ಯೂ. ಗರ್ಭಗುಡಿಯ ಸಮೀಪ ಬಂದು ದಿಟ್ಟಿಸಿ ನೋಡಿದೆವು, ಸರ್ವಮಂಗಳೆ ನಮ್ಮಮ್ಮನನ್ನು. ಇಲ್ಲಿಯವರೆಗೆ ನಮ್ಮನ್ನು ಕರೆತಂದ

ಆಕೆಗೆ ಶ್ರದ್ಧಾಭಕ್ತಿಗಳಿಂದ ನಮಿಸಿದೆವು. ಶಿವ ದೇವಾಲಯಗಳನ್ನು ಹೊಕ್ಕು ಶ್ರೀರಾಮಕೃಷ್ಣರ ಕೊಠಡಿಗೆ ಬಂದು ಅಲ್ಲಿಯೂ ಸ್ವಲ್ಪ ಹೊತ್ತು ಕುಳಿತೆವು. "ಶ್ರೀರಾಮಕೃಷ್ಣ ವಚನವೇದ" ನೆನಪಾಯಿತು. ಅದೆಷ್ಟು ಭಗವದಾಲಾಪ ಇಲ್ಲಿ ನಡೆದಿದೆ! ಅದೆಷ್ಟು ಸಂಕೀರ್ತನೆಗಳು! ಅದೆಷ್ಟು ಬಾರಿ ಶ್ರೀರಾಮಕೃಷ್ಣರು ಸಮಾಧಿಗೆ ಹೋಗಿರುವರು ಇಲ್ಲಿ! ಇದೇ ಮುಂದೆ ಸಾವಿರಾರು ವರ್ಷಕಾಲ ಹರಿಯಬೇಕಾದ ಮಹಾ ಆಧ್ಯಾತ್ಮಿಕ ಪ್ರವಾಹದ ಉಗಮಸ್ಥಾನ—ದಿವ್ಯಗೋಮುಖಿ. ಶ್ರೀರಾಮಕೃಷ್ಣರ ವಾಣಿ ಮತ್ತೆ ಕೇಳಿಸುತ್ತಿರುವಂತೆ ಭಾಸವಾಯಿತು. ಆ ಆನಂದದಲ್ಲಿಯೇ ಮೈಮರೆತಿರುವಾಗ ಸಮಯ ನಮ್ಮನ್ನು ಎಚ್ಚರಿಸಿತು.

ಅಲ್ಲಿಂದ ಹೊರಟು ಪಂಚವಟಿಯ ಬಳಿ ಬಂದು ಅಲ್ಲಿ ಟ್ಯಾಕ್ಸಿಯನ್ನು ಹತ್ತಿದೆವು. ಅಲ್ಲಿಂದ ಕಾಶಿಪುರದ ತೋಟದ ಮನೆಗೆ ಬಂದೆವು. ಅಲ್ಲಿ ಗೇಟಿನ ಬಳಿ ಒಂದು ಸಂಪಿಗೆ ಮರವಿತ್ತಂತೆ. ಕಾಶಿಪುರದ ತೋಟದ ಮನೆಯಲ್ಲೇ ಗುರುದೇವರು ತಮ್ಮ ಕೊನೆಯ ದಿನಗಳನ್ನು ಕಳೆದದ್ದು. ಜನವರಿ ೧ನೆ ತಾರೀಖು ಸಂಪಿಗೆಯ ಮರದಡಿಯಲ್ಲಿ ಕುಳಿತಿದ್ದವರ ಇಷ್ಟಾರ್ಥಗಳೆಲ್ಲ ನೆರವೇರುವಂತೆ ಆಶೀರ್ವದಿಸಿದರಂತೆ. ಅಂದಿನಿಂದ ಶ್ರೀರಾಮಕೃಷ್ಣ ಕೇಂದ್ರಗಳಲ್ಲಿ ಜನವರಿ ಒಂದರಂದು ಕಲ್ಪತರು ದಿನಾಚರಣೆ ನಡೆಯುತ್ತಿದೆ. ಇಂದು ಅಲ್ಲಿ ಸಂಪಿಗೆ ಮರವಿಲ್ಲ. ಒಂದು ಮಾವಿನ ಮರವಿದೆ. ಮೊದಲಿದ್ದ ಸಂಪಿಗೆ ಮರದ ಕಾಂಡವನ್ನು ಜತನವಾಗಿ ಒಂದು ಗಾಜಿನ ಪೆಟ್ಟಿಗೆಯಲ್ಲಿಟ್ಟು ಮ್ಯೂಸಿಯಂನಲ್ಲಿಟ್ಟಿದ್ದಾರೆ. ತೋಟದಿಂದ ಪೂಜಾಗೃಹಕ್ಕೆ ಹೋದೆವು. ಕೆಳಗಡೆ ಮಹಾಮಾತೆಯವರು (ಶ್ರೀಶಾರದಾದೇವಿಯವರು) ವಾಸಿಸುತ್ತಿದ್ದ ಕೊಠಡಿ. ಅಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದು ಮಹಡಿಯ ಮೇಲೆ ಹೋದೆವು. ಅಲ್ಲಿಯೇ ಗುರುದೇವರು ತಮ್ಮ ಕೊನೆಯ ದಿನಗಳನ್ನು ಕಳೆದದ್ದು ಮತ್ತು ಅವರ ಮಹಾಸಮಾಧಿಯಾದದ್ದು. ಅಲ್ಲಿಯೂ ಸ್ವಲ್ಪ ಹೊತ್ತು ಜಪಿಸಿ ಹೊರ ಬಂದೆವು. ಅಕ್ಕಪಕ್ಕದ ಪಾತಿಗಳಲ್ಲಿ ಸುಂದರ ಹೂಗಿಡಗಳು ಮನ ಸೆಳೆಯುತ್ತಿದ್ದವು.

ಅಲ್ಲಿಂದ ಉದ್ಬೋಧನಕ್ಕೆ ಹೋದೆವು. ಗುರುದೇವರು ಸಮಾಧಿಸ್ಥರಾದ ಮೇಲೆ ಮಹಾಮಾತೆಯವರು ಇಲ್ಲಿಯೇ ಇದ್ದದ್ದು. ಮಹಾಮಾತೆಯವರ ಕೊಠಡಿಯ ಬಳಿಯೂ ಸ್ವಲ್ಪ ಹೊತ್ತು ಕುಳಿತು ಪ್ರಸಾದವನ್ನು ಪಡೆದು ಹೊರಬಂದೆವು. ಇಲ್ಲಿಂದ ಮಾಸ್ಟರ್ ಮಹಾಶಯ (ಮಹೇಂದ್ರನಾಥ ಗುಪ್ತ)ರ ಮನೆಗೆ ಬಂದೆವು. ಈಗ ಅಲ್ಲಿ ಅವರ ಮೊಮ್ಮಗ ಮತ್ತು ಅವರ ಹೆಂಡತಿ ಇರುವರು. ಆಕೆ ದೆಹಲಿಯವರಂತೆ. ಸೌಮ್ಯ ಮುಖ, ವಿನಯ ತುಂಬಿ ತುಳುಕುತ್ತದೆ ಅವರ ಮಾತಿನಲ್ಲಿ. ಮಾಸ್ಟರ್ ಮಹಾಶಯರು ಮೊದಲ ಬಾರಿ ಗುರುದೇವರನ್ನು ನೋಡಲು ಬಂದಾಗ ಇದ್ದ ರೀತಿಯ ಒಂದು ಫೋಟೊ, ಕೆಲಕಾಲಾನಂತರದ ಒಂದು ಫೋಟೊ ಮತ್ತು ಈಗ ನಾವು ನೋಡುತ್ತಿರುವ ಒಂದು ಫೋಟೊ—ಇವುಗಳನ್ನು ಅಲ್ಲಿ ಇಟ್ಟಿರುವರು. ಅವರು ಮಲಗುತ್ತಿದ್ದ ಮಂಚ, ಹಾಸಿಗೆ, ದಿಂಬು ಇವುಗಳ ಮೇಲೆ ಶುಭ್ರ ಹೊದಿಕೆಯಿದೆ. ಅವರು ಬಂಗಾಳಿಯಲ್ಲಿ ಬರೆದ ಶ್ರೀರಾಮಕೃಷ್ಣ ವಚನವೇದದ ಪುಸ್ತಕಗಳನ್ನು ಜೋಡಿಸಿಟ್ಟಿದ್ದಾರೆ. ಅಂದು ಗುರುದೇವರ ಬಳಿ ಬಂದ ಭಕ್ತರುಗಳೊಡನೆ ಮಾತನಾಡುವಾಗ ಇವರು ಬರೆಯುತ್ತಿದ್ದ ಡೈರಿಯೂ ಇದೆ. ಎಲ್ಲಕ್ಕೂ ಮಿಗಿಲಾಗಿ ಅವರ ಬಟ್ಟೆಬರೆಗಳೂ ಅವರ ಪಾದರಕ್ಷೆಗಳೂ ಇನ್ನೊಂದು ಗಾಜಿನ ಬೀರುವಿನಲ್ಲಿ ಇವೆ. ಕೆಳಗಡೆ ಒಂದು ಅಗಲವಾದ ಗಾಜಿನ ಪೆಟ್ಟಿಗೆಯಲ್ಲಿ ಗುರುದೇವರ ಜಪಮಾಲೆ ಇತ್ತು. ಅದನ್ನು ಅವರು ಶ್ರೀಮಾತೆಯವರಿಗೆ ಕೊಟ್ಟಿದ್ದರಂತೆ. ಇನ್ನೂ ಕೆಲವು ಸಣ್ಣ ಪುಟ್ಟ ವಸ್ತುಗಳನ್ನು ಜತನವಾಗಿಟ್ಟಿದ್ದಾರೆ. ಪೆಟ್ಟಿಗೆಯನ್ನು ಮುಟ್ಟಲೂ ಬಿಡುವುದಿಲ್ಲ. ಮಾಸ್ಟರ್ ಮಹಾಶಯರು ಗುರುದೇವರನ್ನು ತಮ್ಮ ಮನೆಯಲ್ಲಿ ಪೂಜೆ ಮಾಡಲು ಕೇಳಿಕೊಂಡಿದ್ದರಂತೆ. ಅದು ಸಾಧ್ಯವಾಗದೆ ಇದ್ದುದರಿಂದ ಅವರು ಶ್ರೀಮಾತೆಯವರಿಗೆ ಕನಸಿನಲ್ಲಿ ಹೇಳಿದರಂತೆ. ಅದರಂತೆ ಮಹಾಮಾತೆಯವರು ಕಲಶವೊಂದನ್ನಿಟ್ಟು ಪೂಜಿಸಿದರಂತೆ. ಅಂದಿನಿಂದ ಪ್ರತಿದಿನವೂ ಈ ಎಲ್ಲಕ್ಕೂ ಪೂಜೆ ಸಲ್ಲುತ್ತಿದೆ. ಎಷ್ಟು ಜನ್ಮದ ಸುಕೃತ ಈ ಮಹಾಪುಣ್ಯ! ಸ್ವಲ್ಪ ಹೊತ್ತು ಕುಳಿತು ನಮಿಸಿ ಹೊರಬಂದೆವು. ಪ್ರಸಾದ ಕೊಟ್ಟರು. ಈ ಕೊಠಡಿ ಮಹಡಿಯ ಮೇಲಿದೆ. ಮೆಟ್ಟಿಲು ಕೂಡ ಹಿಂದಿನದೇ.

ಇಲ್ಲಿಂದ ವಿವೇಕಾನಂದರು ಹುಟ್ಟಿ ಬೆಳೆದ ಮನೆಗೆ ಹೋದೆವು. ಅದರ ಪುನರ್ನಿರ್ಮಾಣ ಕಾರ್ಯ ನಡೆಯುತ್ತಿದೆ. ದೂರದಿಂದಲೇ ವಿವೇಕಾನಂದರು ಜನಿಸಿದ ಕೊಠಡಿಯನ್ನು ನೋಡಿ ಹೊರಬಂದೆವು. (ವಿವೇಕಾನಂದರ ಜನ್ಮಸ್ಥಾನದ ಬಗ್ಗೆ ಜುಲೈ ತಿಂಗಳ ಸಂಚಿಕೆಯನ್ನು ನೋಡಿ.) ಅಲ್ಲಿಂದ ಕಾಂಕುರ್‌ಗಾಚಿಗೆ ಹೋದೆವು. ಇದು ಮೊದಲು ಶ್ರೀರಾಮ ಕೃಷ್ಣರ ಗೃಹೀಶಿಷ್ಯರಾದ ರಾಮಚಂದ್ರದತ್ತರ ತೋಟದ ಮನೆಯಾಗಿತ್ತು. ಅಲ್ಲಿ ಒಂದು ಪುಟ್ಟ ಕೊಠಡಿಯಿತ್ತು. ಗುರುದೇವರ ಮಹಾಸಮಾಧಿಯಾದ ಮೇಲೆ ಅವರ ಅಸ್ಥಿಯನ್ನು ಕೆಲಕಾಲ ಇಲ್ಲಿ ಇಟ್ಟಿದ್ದರು. ಅದು ಇಂದು ಬೃಹದಾಕಾರವಾದ ಮಠ. ಅಸ್ಥಿ ಇಟ್ಟಿದ್ದ ಕೊಠಡಿ ಈಗ ಗುರುದೇವರ ಗರ್ಭಗುಡಿ. ಪ್ರಾರ್ಥನಾಲಯದಲ್ಲಿ ಸ್ವಲ್ಪಹೊತ್ತು ಕುಳಿತಿದ್ದು ಮಧ್ಯಾಹ್ನದ ಪ್ರಸಾದವನ್ನು ಅಲ್ಲಿಯೇ ಸ್ವೀಕರಿಸಿ ಅತಿಥಿಗೃಹಕ್ಕೆ ಬಂದೆವು. ಹೃದಯ ತುಂಬಿ ಬಂತು. ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಮುಖಮಾರ್ಜನ ಮುಗಿಸಿ ಟೀ ಕುಡಿದು ಬೇಲೂರು ಮಠದೆಡೆಗೆ ಹೋದೆವು.

ಈಗ ಹೊಸದಾಗಿ ಸಜ್ಜುಗೊಳ್ಳುತ್ತಿದ್ದ ಮ್ಯೂಸಿಯಂ (ವಸ್ತುಪ್ರದರ್ಶನ)ಗೆ ಹೋದೆವು. ಅದು ಮಠದ ಆವರಣದಲ್ಲಿ ವಿಶಾಲವಾದ ಸ್ಥಳದಲ್ಲಿ ಇದೆ. ಗೋಡೆಯ ಮೇಲೆ ದಕ್ಷಿಣೇಶ್ವರ ಮತ್ತು ಪಂಚವಟಿಯ ಚಿತ್ರಗಳನ್ನು ಬಹು ಸುಂದರವಾಗಿ ಬಿಡಿಸಿದ್ದಾರೆ. ಕೆಲಸ ಬಿರುಸಾಗಿ ನಡೆಯುತ್ತಿದೆ. ಗುರುದೇವರಿಗೆ ಸಂಬಂಧಿಸಿದುದೆಲ್ಲವನ್ನೂ ಅವರು ಉಪಯೋಗಿಸುತ್ತಿದ್ದ ಬಟ್ಟೆ ಬರೆಗಳನ್ನೂ ಅಲ್ಲಿ ಪ್ರದರ್ಶನಕ್ಕೆ ಇಡುವರು. ಅಲ್ಲಿಯ ಸ್ವಾಮಿಗಳ ವಿಶೇಷ ಅನುಮತಿಯಿಂದಾಗಿ ಇವೆಲ್ಲವನ್ನೂ ನೋಡುವ ಪರಮ ಸೌಭಾಗ್ಯ ನಮಗೆ ದೊರಕಿತು. ಆಗ ಇನ್ನೂ ಅದು ಸಾರ್ವಜನಿಕರಿಗೆ ತೆರೆದಿರಲಿಲ್ಲ. (ಈಗ ಕೆಲಸ ಮುಗಿದಿದ್ದು ವಸ್ತುಪ್ರದರ್ಶನ ಸಾರ್ವಜನಿಕರಿಗೆ ತೆರೆಯಲ್ಪಟ್ಟಿದೆ.)

ಮರುದಿನ ಬಸ್ಸಿನಲ್ಲಿ ಶ್ರೀಮಾತೆ ಶಾರದಾದೇವಿಯವರ ಜನ್ಮಸ್ಥಾನವಾದ ಜಯರಾಮವಟಿಗೆ ಪಯಣ. ಬೆಳಿಗ್ಗೆ ೬.೦೦ ಗಂಟೆಗೆ ಕೊಲ್ಕತದಿಂದ ಹೊರಟ ಬಸ್ಸು ಜಯರಾಮವಟಿ ತಲುಪಿದ್ದು ಬೆಳಗ್ಗೆ ೮.೩೦ಗಂಟೆಗೆ. ಜಯರಾಮವಟಿ ಆಶ್ರಮದ ಅಧ್ಯಕ್ಷರನ್ನು ನಾವು ಬೇಲೂರು ಮಠದಲ್ಲೇ ಸಂಧಿಸಿದ್ದೆವು. ಅವರಿನ್ನೂ ಜಯರಾಮವಟಿಗೆ

ಹಿಂದಿರುಗಿರಲಿಲ್ಲ. ನಮ್ಮ ವಸ್ತುಗಳೆಲ್ಲವನ್ನೂ ಅತಿಥಿಗೃಹದಲ್ಲಿಟ್ಟು ಪ್ರಾರ್ಥನಾಮಂದಿರಕ್ಕೆ ಹೋದೆವು. ತಾಯಿಯವರ ನಿತ್ಯ ಪೂಜೆ ಯಾಗಿತ್ತು. ಹಳ್ಳಿಯ ಪ್ರಶಾಂತ ವಾತಾವರಣದ ಮಧ್ಯದಲ್ಲಿ ಮಂದಿರ. ಮನಸ್ಸು ಪ್ರಕೃತಿಮಾತೆಯ ಮಡಿಲಿನಲ್ಲಿರುವ ಮಾತೆಯವರ ಸಾನ್ನಿಧ್ಯ ವನ್ನು ಅನುಭವಿಸಿತು. ಸಮಯ ಹೋದದ್ದೆ ತಿಳಿಯಲಿಲ್ಲ.

ಘಂಟೆಯಾದೊಡನೆ ಊಟಕ್ಕೆ ಕುಳಿತೆವು. ಸ್ವಾಮೀಜಿಯವರು ದೂರ ನಿಂತು ವಿಶೇಷ ಅತಿಥಿ ಗಳೆಂಬಂತೆ ನಮ್ಮನ್ನು ಆದರಪೂರ್ವಕವಾಗಿ ನೋಡುತ್ತಾ ನಿಂತಿರುವುದನ್ನು ಕಂಡಾಗ ತಾಯಿಯ ಪ್ರೀತಿಯು ನೆನಪಾಯಿತು. ನಾವು ಮೂರು ಮಂದಿಗೆ ಬಿಸಿ ಬಿಸಿ ಮೆಣಸಿನ ಸಾರು, ಮಾವಿನ ಕಾಯಿ ಉಪ್ಪಿನಕಾಯಿಯನ್ನು ಬಡಿಸಿದರು. ಎಷ್ಟಾದರೂ ತಾಯಿಯ ಮನೆ ತಾನೇ! ದೂರದಿಂದ ಬಂದ ತನ್ನ ಹೆಣ್ಣುಮಕ್ಕಳಿಗೆ ಆದರೋಪಚಾರ. ಚಪ್ಪರಿಸಿ ಚಪ್ಪರಿಸಿ ಊಟ ಮಾಡಿದೆವು. ಸಂಜೆ ಶ್ರೀಮಾತೆಯವರು ವಾಸಿಸುತ್ತಿದ್ದ ಮನೆಯನ್ನೂ, ಸಿಂಹವಾಹಿನಿ ದೇವಾಲಯವನ್ನೂ ನೋಡಿ ಮುಕ್ತವಾದ ಹಳ್ಳಿಯ ಪರಿಸರದಲ್ಲಿ ಅಡ್ಡಾಡಿ ಪ್ರಾರ್ಥನಾ ಮಂದಿರಕ್ಕೆ ಹಿಂದಿರುಗಿದೆವು. ಸಹಜವಾದ ಮಾತೃವಾತ್ಸಲ್ಯವನ್ನು ಚಿಮ್ಮಿಸುವಂತಿದ್ದ ಮಹಾಮಾತೆಯವರ ಆ ವಿಗ್ರಹವನ್ನು ನೋಡುವುದೇ ಒಂದು ಧ್ಯಾನ ವಾಯಿತು. ನಂತರ ಬಾಗಿಲು ಹಾಕುವವರೆಗೂ ಕುಳಿತಿದ್ದು ಊಟ ಮುಗಿಸಿ ಅತಿಥಿಗೃಹಕ್ಕೆ ಹೋಗಿ ತಾಯಿಯ ಪ್ರೀತಿ ವಾತ್ಸಲ್ಯವನ್ನು ಮೆಲುಕು ಹಾಕುತ್ತಾ ಮಲಗಿದೆವು.



ಜಯರಾಮವಟಿಯಲ್ಲಿನ ಶ್ರೀಮಾತೆಯವರ ವಿಗ್ರಹ

ಮರುದಿನ ಬೆಳಿಗ್ಗೆ ಜಯರಾಮವಟಿಯಿಂದ ಶ್ರೀರಾಮಕೃಷ್ಣರ ಜನ್ಮಸ್ಥಳವಾದ ಕಾಮಾರಪುಕುರಕ್ಕೆ ಬಸ್ಸಿನಲ್ಲಿ ಹೋದೆವು. ಕೇವಲ ೫ಕಿ.ಮೀ. ದೂರವಷ್ಟೆ. ಶ್ರೀರಾಮಕೃಷ್ಣರು ಹುಟ್ಟಿದ ಸ್ಥಳದಲ್ಲೇ ಗರ್ಭಗುಡಿ. ಅಲ್ಲಿ ಸ್ವಲ್ಪ ಹೊತ್ತು ಕುಳಿತು ರಘುವೀರ ಮತ್ತು ಶೀತಲಾ ದೇವಿಯ ಮಂದಿರವನ್ನು ನೋಡಿ ಗುರುದೇವ ಶ್ರೀರಾಮಕೃಷ್ಣರು ನೆಟ್ಟಿದ್ದ ಮಾವಿನ ಮರವನ್ನು ಮುಟ್ಟಿ ವಂದಿಸಿ ಜಯರಾಮವಟಿಗೆ ಹಿಂದಿರುಗುವ ವೇಳೆಗೆ ಮಧ್ಯಾಹ್ನದ ಊಟದ ಸಮಯವಾಗಿತ್ತು. ಅಷ್ಟುಹೊತ್ತಿಗೆ ಅಧ್ಯಕ್ಷ ಸ್ವಾಮೀಜಿಯವರು ಹಿಂದಿರುಗಿದ್ದರು. ಜಯರಾಮವಟಿಯಿಂದ ಮರುದಿನ ಬೇಲೂರು ಮಠಕ್ಕೆ ಹಿಂದಿರುಗಬೇಕಿತ್ತು. ನಾವು ಹೊರಡುವ ಮುನ್ನ ಸ್ವಾಮೀಜಿಯವರನ್ನು ಕಾಣಬೇಕೆಂದು ತಿಳಿಸಿದ್ದರು. ಬೆಳಗಿನಜಾವದಲ್ಲೇ ನಾವು ಹೊರಡುವವರಿದ್ದುದರಿಂದ ರಾತ್ರಿ ಊಟವಾದ ಮೇಲೆ ಅವರನ್ನು ಕಾಣಲು ಹೋದಾಗ, ಆತ್ಮೀಯತೆಯಿಂದ ಮಾತನಾಡಿಸಿ, ಎಲ್ಲ ವ್ಯವಸ್ಥೆಯೂ ಸರಿಯಾಗಿತ್ತೇ ಎಂದು ವಿಶೇಷವಾಗಿ ವಿಚಾರಿಸಿದರು. ಅನಂತರ ಸ್ವಲ್ಪ ಒಳಗಡೆ ಹೋದವರು ಹಿಂದಿರುಗಿ ಬಂದು ಮಹಾಮಾತೆಯವರ ವಿಶೇಷ ಪ್ರಸಾದವನ್ನು ನಮಗಿತ್ತು ಆಶೀರ್ವದಿಸಿದರು. ನಮ್ಮ ಮನಸ್ಸಿಗಾದ ಆನಂದ ವರ್ಣಿಸಲಸಾಧ್ಯ. ತಾಯಿಯ ವರ ಪ್ರಸಾದವನ್ನು ಭಕ್ತಿಯಿಂದ ತಲೆಗೊತ್ತಿಕೊಂಡೆವು. ಸ್ವಾಮೀಜಿಯವರಿಗೆ ನಮ್ಮ ಪ್ರಣಾಮಗಳನ್ನು ಸಲ್ಲಿಸಿ ಅತಿಥಿಗೃಹಕ್ಕೆ ಹಿಂದಿರುಗಿದೆವು. ಮನ ಉಲ್ಲಾಸದಿಂದ ಗರಿಗೆದರಿ ಹಾರಾಡುತ್ತಿತ್ತು. ಆ ನೆನಪಲ್ಲೆ ಮಲಗಿದೆವು. ಮುಂಜಾನೆಯ ಆರತಿಯನ್ನು ಮುಗಿಸಿ ಬಸ್ಸನ್ನೇರಿ ಬೇಲೂರು ಮಠಕ್ಕೆ ಹಿಂದಿರುಗಿದೆವು.

ಬೇಲೂರು ಮಠದಲ್ಲಿ ಅಂದು ಸಂಜೆ ಪ್ರಾರ್ಥನೆಯ ನಂತರ ಮಠದ ಆಫೀಸಿಗೆ ಹೋದೆವು. ಅಲ್ಲಿ ಮಠದ ಮ್ಯಾನೇಜರ್ ಸ್ವಾಮಿ ಪ್ರಮೇಯಾನಂದಜಿಯವರು ನಮಗಾಗಿ ಕಾಯುತ್ತಿದ್ದರು. ಅವರ ಬಳಿ ಬಂದು ನಮಸ್ಕರಿಸಿದೆವು. ಅತ್ಯಂತ ಆತ್ಮೀಯತೆಯಿಂದ ನಮ್ಮನ್ನು ಮಾತನಾಡಿಸಿ, ನಮ್ಮ ಯೋಗಕ್ಷೇಮವನ್ನು ವಿಚಾರಿಸಿದರು. ಅನಂತರ ಆಶೀರ್ವಾದಪೂರ್ವಕವಾಗಿ ವಿಶೇಷ ಪ್ರಸಾದವನ್ನು ನೀಡಿ ನಮಗೆ ಪರಮಾನಂದವನ್ನು ಉಂಟು ಮಾಡಿದರು. ದೈವಕೃಪೆ ಎಂದರೆ ಇದೇ ಏನು ಅಂದುಕೊಳ್ಳುತ್ತಾ ಅತಿಥಿಗೃಹಕ್ಕೆ ಹಿಂದಿರುಗಿದೆವು. ಬೇಲೂರು ಮಠದಲ್ಲಿ ಇದೇ ಕೊನೆಯ ರಾತ್ರಿ. ಎದೆ ಹಿಂಡಿದಂತಾಯಿತು. ಎಷ್ಟು ಬೇಗ ಕಳೆದುಹೋದುವು ಎಂಟು ದಿವಸಗಳು! ಅಷ್ಟರಲ್ಲೇ ಊಟಕ್ಕಾಗಿ ಕರೆ ಬಂತು. ರಾತ್ರಿ ಊಟ ಮುಗಿಸಿ ಭಾರಮನದಿಂದ ಮಲಗಿದೆವು.

ಮರುದಿನ ಬೆಳಗ್ಗೆ ಟೀ ಕುಡಿದು ದಕ್ಷಿಣೇಶ್ವರದಲ್ಲಿರುವ ಶ್ರೀಶಾರದಾಮಠದ ಪ್ರಧಾನ ಕೇಂದ್ರಕ್ಕೆ ಹೋದೆವು. ಅಲ್ಲಿ ನಮ್ಮ ಅನೇಕ ಪರಿಚಿತರು ಸಂನ್ಯಾಸಿನಿಯರಾಗಿ ಸೇವಾಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಶಾರದಾ ಮಠದಲ್ಲೇ ನಮ್ಮ ಮಧ್ಯಾಹ್ನದ ಪ್ರಸಾದದ ವ್ಯವಸ್ಥೆಯಾಗಿತ್ತು. ಅಂದೇ ರಾತ್ರಿ ಗೌಹಾತಿ-ಬೆಂಗಳೂರು ಟ್ರೈನಿನಲ್ಲಿ ಬೆಂಗಳೂರಿಗೆ ನಮ್ಮ ಟಿಕೆಟ್ ಕಾಯ್ದಿರಿಸಲಾಗಿತ್ತು. ರೈಲ್ವೆ ಸ್ಟೇಷನ್ ತಲುಪಿದ ನಂತರ ತಿಳಿಯಿತು, ನಮ್ಮ ರೈಲು ಬರುವುದು ಕೆಲವು ಗಂಟೆಗಳು ತಡವಾಗುವುದೆಂದು. ಆದರೆ ನಮ್ಮ ಮನಸ್ಸು ಮಾತ್ರ ಹಗುರವಾಗಿತ್ತು. ನಮ್ಮ ಈ ಪವಿತ್ರ ಯಾತ್ರೆ ಇಷ್ಟು ಸುಸೂತ್ರ ವಾಗಿ ನಡೆಯಿತಲ್ಲಾ ಎಂಬುದನ್ನು ನೆನೆದಂತೆಲ್ಲಾ ಹೃದಯ ತುಂಬಿ ಬರುತ್ತಿತ್ತು.

ರೈಲು ಬಂದು ನಮ್ಮ ವಸ್ತುಗಳನ್ನೆಲ್ಲಾ ನಮ್ಮ ಕಂಪಾರ್ಟ್‌ಮೆಂಟ್‌ನಲ್ಲಿ ಸೇರಿಸಿ ನಾವು ಕುಳಿತ ಸ್ವಲ್ಪ ಹೊತ್ತಿನಲ್ಲಿ ಹೌರಾ ಸ್ಟೇಷನ್‌ನಿಂದ ಕದಲಿತು. ನಮ್ಮ ಕಂಪಾರ್ಟ್‌ಮೆಂಟಿನಲ್ಲಿ ನಮ್ಮ ಎದುರಿನಲ್ಲಿ ಕುಳಿತ ದಂಪತಿಗಳು ವಿಜಯವಾಡದವರು. ಪತಿಗೆ ಗೌಹಾತಿಯಲ್ಲಿ ವಾಯುಪಡೆಯಲ್ಲಿ ಕೆಲಸವಂತೆ. ಪತ್ನಿಗೆ ಕನ್ನಡ ಭಾಷೆ ಬರುತ್ತಿತ್ತು. ಪತಿಯ ಮಾತೃಭಾಷೆ ತೆಲುಗು. ಕನ್ನಡ ಭಾಷೆ ಬಾರದು. ನಮ್ಮ ಯಾತ್ರೆಯ ಬಗ್ಗೆ ಆಕೆ ತುಂಬ ಆಸಕ್ತಿ ವಹಿಸಿ ಮಾತನಾಡಿಸುತ್ತಿದ್ದರು. ನನಗೆ ತಿಳಿದ ರೀತಿಯಲ್ಲಿ ಆಕೆಗೆ ಗುರುದೇವ ಶ್ರೀರಾಮಕೃಷ್ಣರಿಗೆ ಸಂಬಂಧಿಸಿದ ಸ್ಥಳಗಳ ಪರಿಚಯವನ್ನು ಹೇಳುತ್ತಿದ್ದೆ. ಮೇಲೆ ಕುಳಿತಿದ್ದ ಆಕೆಯ ಪತಿ ಕೆಳಗಿಳಿದು ಬಂದರು. ಹೆಂಡತಿ ಗಂಡನಿಗೆ ತೆಲುಗಿನಲ್ಲಿ ನಾನು ಹೇಳಿದುದನ್ನೆಲ್ಲ ಹೇಳಿದಳು. ಅವರು ಶ್ರೀಗುರುದೇವರ ಬಗ್ಗೆ ಇಂಗ್ಲಿಷ್‌ನಲ್ಲಿ ಯಾವುದಾದರೊಂದು

ಪುಸ್ತಕವಿದ್ದರೆ ಕೊಡಿರೆಂದು ನಮ್ಮನ್ನು ಕೇಳಿದರು. ಆದರೆ ಆಗ ಅದು ನಮ್ಮಲ್ಲಿರಲಿಲ್ಲ. ಆದರೆ ದಿವ್ಯತ್ರಯರಿದ್ದ ಒಂದು ಚಿತ್ರಪಟವನ್ನೂ ಮತ್ತು ಅವರ ಉಪದೇಶಗಳಿದ್ದ ಒಂದು ಕರಪತ್ರವನ್ನೂ ಅವರಿಗೆ ಕೊಟ್ಟೆವು. ಅವನ್ನು ಭಕ್ತಿಯಿಂದ ಎದೆಗೊತ್ತಿಕೊಂಡು ತಮ್ಮ ಜೇಬಿನಲ್ಲಿಟ್ಟುಕೊಂಡರು. ವಿಜಯವಾಡದಿಂದ ಗೌಹಾತಿಗೆ ಹಿಂತಿರುಗುವಾಗ ಹೌರಾದಲ್ಲಿಳಿದು ಬೇಲೂರು ಮಠ ಸಂದರ್ಶಿಸಿ ಹೋಗುವೆವೆಂದು ಹೇಳಿದರು. ಬೆಳಿಗಿನ ಜಾವ ೪.೩ಂಕ್ಕೆ ವಿಜಯವಾಡ ಬಂದಾಗ ಅವರು ನಮ್ಮಿಂದ ಬೀಳ್ಕೊಂಡರು.

ಇದೇ ಜೀವನದ ಪಯಣ, ನಮ್ಮ ಕಾಲ ತುಂಬಿಬಂದಾಗ ನಾವೂ ಹೀಗೆಯೇ ನಮ್ಮ ನೆಂಟರಿಷ್ಟರೆಲ್ಲರನ್ನೂ ಬಿಟ್ಟು, ಇಳಿದು ಹೋಗುವುದು ತಾನೇ ಎಂದು ಮನಸ್ಸಿಗನಿಸುತ್ತಿತ್ತು. ಕೊನೆಗೆ ರೈಲು ಬೆಂಗಳೂರು ತಲುಪಿದಾಗ ನಮ್ಮ ದಾರಿ ನಾವು ಹಿಡಿದೆವು. ಪವಿತ್ರ ಯಾತ್ರೆಯನ್ನು ಮುಗಿಸಿ ಹಿಂದಿರುಗಿದ ಮನಸ್ಸಿಗೆ ಏನೋ ಒಂದು ರೀತಿಯ ನೆಮ್ಮದಿ ಪ್ರಸನ್ನತೆ ಇತ್ತು. ಇಂತಹ ಪವಿತ್ರವಾದ ಯಾತ್ರೆ ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ ಮತ್ತು ಸ್ವಾಮಿ ವಿವೇಕಾನಂದರ ಕೃಪೆಯಿಂದ ಯಶಸ್ವಿಯಾಯಿತು. ಅವರ ಕೃಪೆಯೇ ಈ ಜೀವನ ಯಾತ್ರೆಯನ್ನೂ ಯಶಸ್ವಿಗೊಳಿಸುವುದೆಂಬ ತುಂಬು ಭರವಸೆಯಿಂದ ಈ ಪ್ರವಾಸಕಥನವನ್ನು ಮುಗಿಸುತ್ತೇನೆ.

# ಜಗತ್ತೆಲ್ಲ ನಿನ್ನದೇ

ಗಿರಿಜಾದೇವಿ

ಶ್ರೀಮಾತೆ ಶಾರದಾದೇವಿಯವರ ಪ್ರಸಿದ್ಧ ಉಪದೇಶವೊಂದನ್ನು ಭಗವದ್ಗೀತೆಯ ಬೋಧನೆಯೊಂದಿಗೆ ಹೋಲಿಸಿ ವಿಶ್ಲೇಷಣೆ ನಡೆಸಿರುವ ಶ್ರೀಮತಿ ಗಿರಿಜಾದೇವಿಯವರು ಮೈಸೂರಿನಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು.

"**ನಿನಗೆ ಮನಶ್ಶಾಂತಿ** ಬೇಕಿದ್ದರೆ ಇತರರಲ್ಲಿ ತಪ್ಪುಗಳನ್ನು ಹುಡುಕಬೇಡ. ಬದಲಾಗಿ ನಿನ್ನ ತಪ್ಪುಗಳನ್ನೇ ನೋಡಿಕೋ. ಪ್ರಪಂಚವನ್ನೆಲ್ಲ ನಿನ್ನದಾಗಿಸಿಕೊಳ್ಳುವುದನ್ನು ಕಲಿ. ಇಲ್ಲಿ ಯಾರೂ ಪರರಲ್ಲ. ಒಟ್ಟು ಪ್ರಪಂಚವೇ ನಿನ್ನ ಸ್ವಂತದ್ದಾಗಿದೆ." ಇದು ಶ್ರೀಮಾತೆ ಶಾರದಾದೇವಿಯವರ ನಲ್ನುಡಿ, ಅಂತಿಮ ಅಮರ ಸಂದೇಶ.

ವೇದೋಪನಿಷತ್ತುಗಳಲ್ಲಿ ಭಗವತ್‌ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಕಷ್ಟಸಾಧ್ಯವಾದ ಪ್ರಕ್ರಿಯೆಗಳನ್ನೆಲ್ಲ ಕ್ರೋಢೀಕರಿಸಿ ಸಾಮಾನ್ಯವಾದ ಆಡುಭಾಷೆಯಲ್ಲಡಗಿಸಿ ಉಪದೇಶಿಸಿದ್ದಾರೆ ಶ್ರೀಮಾತೆಯವರು. ಭಗವತ್ ಸಾಕ್ಷಾತ್ಕಾರವೇ ಮಾನವ ಜೀವನದ ಪರಮೋದ್ದೇಶ ಎಂದು ಸಾರುತ್ತ, ಬದುಕಿನ ಪ್ರತಿಯೊಂದು ಕ್ಷಣವೂ ಭಗವದ್ವಿಷಯಗಳನ್ನೇ ಬೋಧಿಸುತ್ತಿದ್ದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಸಹಧರ್ಮಿಣಿಯಾದ ಶ್ರೀಮಾತೆಯವರಿಗೆ ತಿಳಿದಿತ್ತು, ಒಂದಿಷ್ಟು ಅಭ್ಯಾಸದಿಂದ ಜನಸಾಮಾನ್ಯರೂ ತಮ್ಮ ಈ ಸಂದೇಶವನ್ನು ಸುಲಭವಾಗಿ ತಮ್ಮದಾಗಿಸಿಕೊಳ್ಳಬಹುದು, ತತ್ಫಲವಾಗಿ ಆತ್ಮಸಾಕ್ಷಾತ್ಕಾರ ದ್ವಾರಾ ಪರಮಶಾಂತಿಯನ್ನು ಪಡೆದುಕೊಳ್ಳಬಹುದು ಎಂದು.

ಶ್ರೀಮಾತೆಯವರೇನೋ ಇಲ್ಲಿ ಅಪರಿಚಿತರಾರೂ ಇಲ್ಲ ಅಂದಿದ್ದಾರೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ನಮ್ಮ ಮನೆಯ ಸುತ್ತಮುತ್ತಲಿನವರೇ ನಮಗೆ ಅಪರಿಚಿತರಿರುತ್ತಾರಲ್ಲ, ಇನ್ನು ಪ್ರಪಂಚದ ಬಗ್ಗೆ ಹೇಳುವುದೇನಿದೆ ಎನ್ನುವ ಸಂದೇಹ ಬರುವುದು ಸಹಜವೆ. ಗೂಢವಾದ ಅಂತರಾತ್ಮನ ವಿಚಾರವಾಗಲಿ ಅಥವಾ ಬೇರಾವುದೆ ವಿಷಯವಾಗಲಿ ಚಿಂತನ ಮಂಥನ ಮಾಡದೆ ಇಂಗಿತಾರ್ಥ ಸ್ಪಷ್ಟವಾಗಲಾರದು. ಹಾಗೆಯೇ ಇಲ್ಲಿ ಶ್ರೀಮಾತೆಯವರ ಮಾತಿನ ವಾಚ್ಯಾರ್ಥವನ್ನು ಬಿಟ್ಟು ಲಕ್ಷ್ಯಾರ್ಥವನ್ನು ಗ್ರಹಿಸಿ, ಅದರಂತೆ ನಡೆದು ನಮ್ಮ ಉದ್ಧಾರಮಾಡಿಕೊಳ್ಳಬೇಕಿದೆ. ವೇದೋಪನಿಷತ್ತುಗಳ ಸಾರವೆನಿಸಿರುವ ಭಗವದ್ಗೀತೆಯಲ್ಲಿ ಶ್ರೀಮಾತೆಯವರ ಈ ಸಂದೇಶಕ್ಕೆ ವಿಪುಲವಾದ ವಿವರಗಳು ಲಭ್ಯ. ಅದರ ಏಳನೇ ಅಧ್ಯಾಯದಲ್ಲಿ ಭಗವಂತ ಹೀಗೆ ಹೇಳುತ್ತಾನೆ:

**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ |**
**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ||** (7.7)

ಸೃಷ್ಟಿರಚನೆಯ ಬಗ್ಗೆ ಹೇಳುತ್ತಾ, ಪರಮಾತ್ಮನಾದ ತನಗಿಂತ ಭಿನ್ನ ಪದಾರ್ಥವೇ ಇಲ್ಲ, ಚರಾಚರಾತ್ಮಕವಾದ ಸೃಷ್ಟಿ, ಎಲ್ಲವೂ, ವಿವಿಧ ರೀತಿಯ ಮಣಿಗಳನ್ನು ಸೂತ್ರದಲ್ಲಿ ಪೋಣಿಸಿದಂತೆ, ತನ್ನನ್ನೇ ಆಧರಿಸಿದೆ ಎಂದು ಗೋಚರ ಸೃಷ್ಟಿಯ ಅಗೋಚರ ಆಧಾರದ ಬಗ್ಗೆ ಸ್ಪಷ್ಟಪಡಿಸುತ್ತಾನೆ ಭಗವಂತ. ನಾವೂ ಭಗವದ್ಭಾವವನ್ನು ಪಡೆದಾಗ ಎಲ್ಲರೂ ನಮ್ಮವರೇ, ಯಾರೂ ಪರರೆನಿಸುವುದಿಲ್ಲ.

ವಿನ್ಯಾಸಪೂರ್ಣವಾಗಿ ವಿವಿಧ ಬಣ್ಣದ ಹೂಗಳನ್ನು ಮಾಲೆಯಾಗಿ ಹೆಣೆದಾಗ ಅದರ ಅಂದಕ್ಕೆ ಆಕರ್ಷಿತರಾಗುತ್ತೇವೆಯೆ ಹೊರತು, ಆಧಾರವಾದ ದಾರದತ್ತ ನಮ್ಮ ಗಮನ ಹೋಗುವುದೇ ಇಲ್ಲ. ಹೂಗಳು ಬಾಡಿ ಉದುರಿದರೂ ದಾರ ಮಾತ್ರ ಹಾಗೇ ಉಳಿಯುತ್ತದೆ. ಅಂತೆಯೆ ತ್ರಿಗುಣಾತ್ಮಿಕೆಯಾದ ಪ್ರಕೃತಿಯ ಬೆಡಗಿಗೆ ಮಾರುಹೋಗಿ, ಆಧಾರಭೂತವಾದ ಪರಮಪುರುಷನನ್ನು ಮರೆಯುತ್ತೇವೆ. ಇಂದ್ರಿಯಗೋಚರವಾದ ನಾಮ-ರೂಪಾತ್ಮಕ ಜಗತ್ತನ್ನೇ ಸತ್ಯವೆಂದು ಭ್ರಮಿಸುತ್ತೇವೆ. ನಿತ್ಯಾನಿತ್ಯವಸ್ತುವಿವೇಕದ ಅಭಾವದಿಂದುಂಟಾದ ಅಜ್ಞಾನ ಸ್ಥಿತಿ ಇದು. ಪಂಚಭೂತಾತ್ಮಕವಾದ ಷಡ್ವಿಕಾರಗಳಿಂದ ಕೂಡಿದ ಈ ಶರೀರವೇ ನಾನಾಗಿದ್ದೇನೆ ಎಂಬ ಮರುಳುಪಾಠವನ್ನು ಇಂದ್ರಿಯಗಳು ಬೋಧಿಸುತ್ತವೆ. ಮನಸ್ಸು ಇದನ್ನೇ ನಂಬಿ ಇಂದ್ರಿಯಗಳ ಬೆನ್ನ ಹಿಂದೆ ಓಡುವುದನ್ನು ಅಭ್ಯಾಸ ಮಾಡಿಕೊಂಡು, ಜೀವಿಯನ್ನು ಪರಮಾತ್ಮನಿಗೆ ವಿಮುಖಿಗೊಳಿಸಿ ಜನನಮರಣ ಚಕ್ರದಲ್ಲಿ ಸಿಕ್ಕಿಸಿ ನರಳುವಂತೆ ಮಾಡುತ್ತದೆ. ಇಂತಹ ಮನಸ್ಸನ್ನು ಬ್ರಹ್ಮಾಕಾರವಾಗಿ ಪಳಗಿಸಬೇಕಾಗಿದೆ. ಇಂದ್ರಿಯಗಳು ಅನುಭವಿಸಿ